# ಸ್ವಯಂ ಉದ್ಯೋಗ / ಉದ್ಯಮಶೀಲತಾ ಅಭಿವೃದ್ಧಿ ಯೋಜನೆ

1. ಗುರಿಗಳಿಗೆ ಅನುಗುಣವಾಗಿ ಮಾತ್ರ ಪ್ರಸ್ತಾವನೆಗಳನ್ನು ಪರಿಗಣಿಸುವುದು.
2. ನಿಗದಿಪಡಿಸಿರುವ ಭೌತಿಕ ಗುರಿಯಂತೆ ಮುಂಚಿತವಾಗಿ ಲೀಡ್ ಬ್ಯಾಂಕುಗಳಿಗೆ ಮಾಹಿತಿ ನೀಡಿ ಅವರ ಸೇವಾ ವ್ಯಾಪ್ತಿಗೆ ಒಳಪಡುವ ಬ್ಯಾಂಕುಗಳಿಗೆ ಗುರಿ ನಿಗದಿಪಡಿಸಲು ಕೋರುವುದು.
3. ರಾಷ್ಟ್ರೀಕೃತ ಬ್ಯಾಂಕ್, ಷೆಡ್ಯೂಲ್ ಬ್ಯಾಂಕ್ ಹಾಗೂ ಗ್ರಾಮೀಣ ಬ್ಯಾಂಕ್‌ಗಳಿಗೆ ಮಾತ್ರ ಆಯ್ಕೆಯಾದ ಫಲಾಪೇಕ್ಷಿಗಳ ಅರ್ಜಿಗಳನ್ನು ಕ್ಷೇತ್ರಕ್ಕೆ ನಿಗಧಿಪಡಿಸಿರುವ ಗುರಿಯ ಮಿತಿಯೊಳಗೇ ಶಿಫಾರಸ್ಸು ಮಾಡತಕ್ಕದ್ದು.
4. ಬ್ಯಾಂಕುಗಳು ಸಾಲ ಮಂಜೂರಾತಿ ನೀಡಿ, ಸಹಾಯಧನ ಬಿಡುಗಡೆ ಮಾಡಲು ನಿಯಮಾನುಸಾರ ಕಳುಹಿಸುವ ಬೇಡಿಕೆ (ಕ್ಲೈಂ)ಗಳನ್ನು ಪರಿಶೀಲಿಸಿ, ಮಂಜೂರಾತಿ ನೀಡಿರುವ ಅರ್ಜಿಯು ಜಿಲ್ಲಾ ಕಛೇರಿಯಿಂದ ಶಿಫಾರಸ್ಸುಗೊಂಡಿರುವುದನ್ನು ಖಾತ್ರಿ ಪಡಿಸಿಕೊಂಡ ನಂತರವೇ ಬ್ಯಾಂಕಿಗೆ ಸಹಾಯಧನ ಬಿಡುಗಡೆ ಮಾಡಲು ಕ್ರಮವಹಿಸುವುದು.
5. ಮಂಜೂರಾತಿ ನೀಡಿದ ಪ್ರತಿಯೊಬ್ಬ ಫಲಾನುಭವಿಗೆ ಪ್ರತ್ಯೇಕವಾಗಿ ಮಂಜೂರಾತಿ ಆದೇಶವನ್ನು ನೀಡುವುದು ಮತ್ತು ಬ್ಯಾಂಕ್‌ನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ಸಹಕರಿಸುವುದು.
6. ಸಹಾಯಧನವನ್ನು ಬ್ಯಾಂಕಿಗೆ ಕಳುಹಿಸಿದ 30 ದಿವಸಗಳೊಳಗಾಗಿ ಸಹಾಯಧನದೊಂದಿಗೆ ಸಾಲವನ್ನು ಫಲಾನುಭವಿಗಳಿಗೆ ಸ್ವತ್ತುಗಳನ್ನು ಸೃಜಿಸಲು ಬಿಡುಗಡೆಯಾಗುವಂತೆ ಕ್ರಮವಹಿಸುವುದು.
7. ಫಲಾನುಭವಿಗೆ ನಿಗಮ ಮತ್ತು ಬ್ಯಾಂಕಿನಿಂದ ಕಲ್ಪಿಸಲಾದ ಸೌಲಭ್ಯದಿಂದ ಸೃಜಿಸಿದ ಸ್ವತ್ತಿನ ಛಾಯಾ ಚಿತ್ರವನ್ನು ತೆಗೆದು, ಅದರ ಒಂದು ಪ್ರತಿಯನ್ನು ಜಿಲ್ಲಾ ಕಛೇರಿಯಲ್ಲಿ ನಿರ್ವಹಿಸಲಾಗುವ ಫಲಾನುಭವಿಯ ವೈಯಕ್ತಿಕ ಸಾಲದ ಕಡತದಲ್ಲಿಡುವುದು ಮತ್ತು ಮತ್ತೊಂದು ಪ್ರತಿಯನ್ನು ಪೂರ್ಣ ವಿವರಗಳೊಂದಿಗೆ ನಿಗಮದ ಕೇಂದ್ರ ಕಛೇರಿಗೆ ಕಳುಹಿಸುವುದು.
8. ನಿಗಮದಿಂದ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾದ ಸಹಾಯಧನವನ್ನು ಸಾಲದ ಹಣದೊಂದಿಗೆ ವಿನಿಯೋಗ ಮಾಡಿದ ಬಗ್ಗೆ ಹಣ ವಿನಿಯೋಗ ಪ್ರಮಾಣ ಪತ್ರವನ್ನು ಬ್ಯಾಂಕ್‌ನ ವ್ಯವಸ್ಥಾಪಕರ ಮತ್ತು ಜಿಲ್ಲಾ ವ್ಯವಸ್ಥಾಪಕರ ಜಂಟಿ ಸಹಿಯೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
9. ಪ್ರತಿ ತಿಂಗಳು ಸೌಲಭ್ಯ ಕಲ್ಪಿಸಲಾದ ಮತ್ತು ಸಹಾಯಧನ ಮತ್ತು ಸಾಲದ ಹಣದ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಫಲಾನುಭವಿವಾರು ಮತ್ತು ಉದ್ದೇಶವಾರು ಸಿದ್ದಪಡಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.